## ಕರ್ನಾಟಕ ಸರ್ಕಾರದ ನಡವಳಿಗಳು

10 OCT 2012
ಸಂ. 2970

ವಿಷಯ : ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಭೂ ಖರೀದಿ ಯೋಜನೆಯಲ್ಲಿ ಘಟಕ ವೆಚ್ಚ ರೂ.2.50ಲಕ್ಷಗಳಿಂದ ರೂ.5.00ಗಳಿಗೆ ಹೆಚ್ಚಿಸುವ ಬಗ್ಗೆ.

ಉಲ್ಲೇಖ :
1) ಸರ್ಕಾರಿ ಆದೇಶ ಸಂಖ್ಯೆ: ಸಕಇ/121/ಬಿ.ಎಂ.ಎಸ್/2010 ದಿನಾಂಕ:14/07/2010.
2) ಸರ್ಕಾರ ಆದೇಶ ಸಂಖ್ಯೆ: ಸಕಇ/79/ಎಸ್.ಡಿ.ಎಸ್/2012 ದಿನಾಂಕ:13/06/2012
3) ವ್ಯವಸ್ಥಾಪಕ ನಿರ್ದೇಶಕರು, ಡಿ.ಬಿ.ಸಿ.ಡಿ.ಸಿ., ಇವರ ಏಕ ಕಡತದ ಪ್ರಸ್ತಾವನೆ ಸಂಖ್ಯೆ: ದೇಹಿನಿ/ಸಮನ್ವಯ/ಅ/ ಭೂಖ/ಸಿಆರ್-/2009-10 ದಿನಾಂಕ:16/08/2012.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಉಲ್ಲೇಖ (1)ರ ಆದೇಶದಲ್ಲಿ ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಭೂ ಖರೀದಿ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟಕ ವೆಚ್ಚವನ್ನು ನೋಂದಾಯಿತ ಬೆಲೆಯ ಎರಡು ಪಟ್ಟುವರೆಗೆ ಏರಿಸಿ ಘಟಕ ವೆಚ್ಚದ ಗರಿಷ್ಟ ಮಿತಿ 2.50 ಲಕ್ಷ ರೂಗಳನ್ನು ಮೀರದಂತೆ ಖರೀದಿಸಲು ಹಾಗೂ ಈ ನೋಂದಾಯಿತ ಬೆಲೆಗಿಂತ ಹೆಚ್ಚಾಗಿದ್ದಲ್ಲಿ ಅಂತಹ ಪ್ರಕರಣಗಳಿಗೆ ಕಂದಾಯ ಇಲಾಖೆಯ ಅನುಮೋದನೆ ಪಡೆಯಲು ಆದೇಶಿಸಿದೆ.

ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಭೂ ಒಡೆತನ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟಕ ವೆಚ್ಚದ ಆರ್ಥಿಕ ಮಿತಿಯನ್ನು 3.00 ಲಕ್ಷ ದಿಂದ ರೂ.5.00 ಲಕ್ಷದವರೆಗೆ ಹೆಚ್ಚಿಸಿ ಆದೇಶಿಸಿದೆ.

ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಭೂ ಖರೀದಿ ಯೋಜನೆಯ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೂ ನಿಗದಿಪಡಿಸುವಂತೆ, ಅಂದರೆ, ರೂ.2.50ಲಕ್ಷಗಳಿಂದ ರೂ.5.00ಲಕ್ಷಗಳಿಗೆ ಹೆಚ್ಚಿಸಲು ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಏಕ ಕಡತದಲ್ಲಿ ಪ್ರಸ್ತಾಪಿಸಿರುತ್ತಾರೆ.

ಅದರಂತೆ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಸಕಇ 265 ಬಿಎಂಎಸ್ 2012 ದಿನಾಂಕ: 20.09.2012

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಭೂ ಒಡೆತನ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟಕ ವೆಚ್ಚದ ಆರ್ಥಿಕ ಮಿತಿಯನ್ನು ರೂ.2.50 ಲಕ್ಷದಿಂದ ರೂ.5.00ಲಕ್ಷಗಳವರೆಗೆ ಈ ಕೆಳಕಂಡ ಷರತ್ತುಗಳನ್ವಯ ಹೆಚ್ಚಿಸಿ ಆದೇಶಿಸಿದೆ.

1. ಈ ಯೋಜನೆಯು ಅಲೆಮಾರಿ/ಅರೆ ಅಲೆಮಾರಿ ಭೂರಹಿತ ಕೃಷಿ ಕಾರ್ಮಿಕರಿಗೆ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಅನ್ವಯಿಸುವುದು. ಕೃಷಿ ಜಮೀನು ಮಾತ್ರ ಖರೀದಿಸತಕ್ಕದ್ದು. ಇದರ ಫಲಾನುಭವಿಗಳು ಯಾವುದೇ ಕಾರಣಕ್ಕೆ ಈ ಜಮೀನನ್ನು ಪರಭಾರೆ ಅಥವಾ ಮಾರಾಟ ಮಾಡತಕ್ಕದ್ದಲ್ಲ.
2. ಘಟಕ ವೆಚ್ಚದಲ್ಲಿ ಶೇ.50 ಸಾಲ ಮತ್ತು ಶೇ.50 ಸಹಾಯಧನ ಒದಗಿಸತಕ್ಕದ್ದು.
3. ಘಟಕ ವೆಚ್ಚ ರೂ.5.00 ಲಕ್ಷದೊಳಗೆ, ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನುಗಳನ್ನು ಅರ್ಧ ಎಕರೆಗೆ (20 ಗುಂಟೆಗೆ) ಕಡಿಮೆಯಾಗದಂತೆ ಖರೀದಿಸತಕ್ಕದ್ದು.
4. ಅಲೆಮಾರಿ/ಅರೆಮಾರಿ ಮಹಿಳೆಯರ ಹೆಸರಿಗೆ ಜಮೀನನ್ನು ನೊಂದಣಿ ಮಾಡಿಸತಕ್ಕದ್ದು.

5 ಈ ಯೋಜನೆಯಲ್ಲಿ ಮಂಜೂರು ಮಾಡಿದ ಅಲೆಮಾರಿ/ಅರೆ ಅಲೆಮಾರಿ ಜಮೀನನ್ನು ಬೇರೆ ಯಾರಾದರೂ ಖರೀದಿಸಿದಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ.

ಉಳಿದಂತೆ ಭೂ ಒಡೆತನ ಯೋಜನೆಯಲ್ಲಿ ಈ ಹಿಂದಿನ ಆದೇಶಗಳಲ್ಲಿ ತಿಳಿಸಿರುವ ಷರತ್ತುಗಳು ಮುಂದುವರಿಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 661 ವೆಚ್ಚ3/12 ದಿನಾಂಕ:01.09.2012 ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ನಿರ್ದೇಶಕರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು
-8 OCT 2012

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಜಿ. ಮುಳಕೂರ)

ಸರ್ಕಾರದ ಅಧೀನ ಕಾರ್ಯದರ್ಶಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು.
4. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ-3, ವಿಧಾನಸೌಧ
5. ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಮಾನ್ಯ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು